


ಎಲ್ಲರಿಗೂ ಅಭಿವ್ಯಕ್ತಿ ಸ್ವಾತಂತ್ರ್ಯ ಇದೆ. ಅದಕ್ಕೆ ಕಡಿವಾಣ ಹಾಕುವುದು ಸರಿಯಲ್ಲ. ಹಾಗೆಂದು ಲೈಂಗಿಕ ಪ್ರಚೋದನೆಯ ಸಿನಿಮಾಗಳಿಗೆ ನಿಯಂತ್ರಣ ಹೇರಿದರೆ ಅದು ಅಭಿವ್ಯಕ್ತಿ ಸ್ವಾತಂತ್ರ್ಯದ ಹರಣ ಆಗುವುದಿಲ್ಲ.



ಗಿರೀಶ್ ಕಾಸರವಳ್ಳಿ

ಸಿನಿಮಾ ಸೆನ್ಸಾರ್ ಬೇಕಾ ಅಥವಾ ಬೇಡವಾ ಎನ್ನುವ ವಿಚಾರವೇ ಎರಡು ಅಲಗಿನ ಕತ್ತಿ ಇದ್ದಂತೆ. ಬೇಕು ಎಂದರೆ ಒಂದು ರೀತಿಯ ಸಮಸ್ಯೆ. ಬೇಡ ಎಂದರೆ ಮತ್ತೊಂದು ಬಗೆಯ ತೊಂದರೆ. 'ಸೆನ್ಸಾರ್ ಬೇಡವೇ ಬೇಡ' ಎಂದು ಪ್ರತಿಪಾದಿಸಿದರೆ, ಭಾರತದ ಸಿನಿಮಾಗಳಲ್ಲಿ ಲೈಂಗಿಕ ಪ್ರಚೋದನೆಯ ಅಂಶಗಳು ಹಾಗೂ ಅಪರಾಧ ಪ್ರಚೋದನೆಯ ಅಂಶಗಳು ತುಂಬಾ ಜಾಸ್ತಿ ಆಗುವ ಸಾಧ್ಯತೆಯೂ ಇದೆ. ಏಕೆಂದರೆ ನಮ್ಮಲ್ಲಿ ಸಿನಿಮಾ ಮಾಧ್ಯಮವನ್ನು ಸಾಮಾಜಿಕ ಕಳಕಳಿಯಿಂದ ನೋಡುವವರು ಬಹಳ ಕಡಿಮೆ ಇದ್ದಾರೆ.

ದೇಶದಲ್ಲಿ ವರ್ಷಕ್ಕೆ ಸಾವಿರ ಚಲನಚಿತ್ರಗಳು ತಯಾರಾಗುತ್ತವೆ. ಅವುಗಳಲ್ಲಿ 900 ಸಿನಿಮಾಗಳು ವಾಣಿಜ್ಯ ದೃಷ್ಟಿಕೋನದಿಂದ ತಯಾರಾಗುತ್ತಿವೆ. ಇಂತಹ ಸಿನಿಮಾಗಳ ನಿರ್ದೇಶಕರಿಗೆ ಮಾಧ್ಯಮ ಒಂದು ರೀತಿಯ ಜೂಜು ಇದ್ದಂತೆ. ಅವರಿಗೆ ಚಲನಚಿತ್ರ ವ್ಯಾಪಾರದ ಸಾಧನ. ದುಡ್ಡು ಬಾಚಿಕೊಳ್ಳುವ ಏಕೈಕ ಉದ್ದೇಶದಿಂದ ಸಿನಿಮಾಗಳನ್ನು ಮಾಡುತ್ತಾರೆ. ಒಂದು ವೇಳೆ ಸೆನ್ಸಾರ್ ನಿರ್ಬಂಧ ಇಲ್ಲದಿದ್ದರೆ ಆ ಕಡೆಗೆ ಎಳೆತ ಜಾಸ್ತಿ ಆಗಬಹುದು. ಇದು ನನ್ನ ಭಯ. ಕೆಲವರು ಸ್ವಯಂನಿರ್ಬಂಧದ ಬಗ್ಗೆ ಮಾತನಾಡುತ್ತಾರೆ. ಉದ್ಯಮ ಜವಾಬ್ದಾರಿಯುತವಾಗಿ ಇದ್ದಾಗ ಮಾತ್ರ ಸ್ವಯಂನಿರ್ಬಂಧ ಹೇರಿಕೊಳ್ಳಬಹುದು.

ನಮಗೆ ಗೊತ್ತಿರುವ ಹಾಗೆ ನಮ್ಮ ನಟ–ನಟಿಯರಿಗಿಂತ ಬಾಲಿವುಡ್ ಕಲಾವಿದರು ಹೆಚ್ಚು ಮುಕ್ತ ಮತ್ತು ಸ್ವಚ್ಛಂದವಾಗಿರುತ್ತಾರೆ. ಅವರು ಒಂದು ಹಂತದಲ್ಲಿ ನಗ್ನತೆ ಹಾಗೂ ಸೆಕ್ಸ್ ದೃಶ್ಯಗಳನ್ನು ಬಹುಬೇಗ ಒಪ್ಪಿಕೊಳ್ಳುತ್ತಾರೆ. ಇದರಿಂದಾಗಿ ನಮ್ಮವರು ಮತ್ತಷ್ಟು ಮೂಲೆಗುಂಪಾಗುವ ಅಪಾಯವೂ ಇದೆ.

ಒಂದು ಕಾಲದಲ್ಲಿ ಮಲಯಾಳಂನಲ್ಲಿ ಶ್ರೇಷ್ಠ ಸಿನಿಮಾಗಳು ತಯಾರಾಗುತ್ತಿದ್ದವು. ಬಳಿಕ ಅಲ್ಲಿನ ಸಿನಿಮಾಗಳಲ್ಲಿ ಲೈಂಗಿಕ ಪ್ರಚೋದನೆಯ ದೃಶ್ಯಗಳು ಹೆಚ್ಚಾದವು. ಆ ಕಾಲದಲ್ಲಿ ಮಲಯಾಳಂ ಸಿನಿಮಾಗಳು ದೇಶದಾದ್ಯಂತ ವ್ಯಾಪಕವಾಗಿ ಪ್ರಚಾರ ಪಡೆದವು. ಅಲ್ಲಿ ಅಂತಹ ಸಿನಿಮಾಗಳು ಜಾಸ್ತಿ ಬಂದ ಕಾರಣ ಕಲಾತ್ಮಕ ಚಿತ್ರಗಳ ನಿರ್ದೇಶಕರು ಮಾತ್ರವಲ್ಲ, ಉತ್ತಮ ವಾಣಿಜ್ಯ ಚಿತ್ರಗಳ ನಿರ್ದೇಶಕರೂ ಸಮಸ್ಯೆ ಎದುರಿಸಿದರು. ಹಾಗಾಗಿ ಸೆನ್ಸಾರ್ ಬೇಕು ಎನ್ನುವ ವಾದ ಬಲವಾಗುತ್ತದೆ. ಆದರೆ 'ಸೆನ್ಸಾರ್ ಬೇಕು' ಎಂದರೆ ಇನ್ನೊಂದು ರೀತಿಯ ಸಮಸ್ಯೆ ಎದುರಿಸುತ್ತೇವೆ.

ಸಿನಿಮಾ ಅನ್ನುವುದು ಸೃಜನಶೀಲ ಕ್ರಿಯೆ. ಸಿನಿಮಾ ರಂಗದ ಸೃಜನಶೀಲ ವ್ಯಕ್ತಿಗಳು ಸಮಾಜದ ಸಾಕ್ಷೀಪ್ರಜ್ಞೆಯಂತೆ ಕೆಲಸ ಮಾಡುತ್ತಾರೆ. ಅವರ ಕೃತಿಗಳಲ್ಲಿ ವಿಮರ್ಶಾತ್ಮಕ ಟೀಕೆಗಳು ಇರುತ್ತವೆ. ಅದನ್ನು ಸಮಾಜ ಸಕಾರಾತ್ಮಕವಾಗಿ ಸ್ವೀಕರಿಸಬೇಕು. ಎಷ್ಟೋ ನಿರ್ಮಾಪಕ– ನಿರ್ದೇಶಕರು ರಾಜಕೀಯ ನಿಲುವುಗಳ ಅಭಿವ್ಯಕ್ತಿಯ ಚಲನಚಿತ್ರಗಳನ್ನು ತಯಾರಿಸುತ್ತಾರೆ. ಅದು ಅವರ ನಿಲುವು. ಅಂತಹ ಚಿತ್ರಗಳ ದೃಶ್ಯಗಳಿಗೆ ಕಡಿತ ಮಾಡಲು ಮುಂದಾದರೆ, ಅದಕ್ಕೆ ನನ್ನ ವಿರೋಧ ಇದೆ. ಆಕ್ಷೇಪಾರ್ಹ ಅಂಶಗಳು ಕೇವಲ 'ಐಟಂ' ಆಗಿ ಬಂದರೆ ಅದನ್ನು ಕಡಿತ ಮಾಡಬಹುದು. ಅದು ಬಿಟ್ಟು ಸೃಜನಶೀಲ ನಿರ್ದೇಶಕರ ನಿಲುವುಗಳಿಗೇ ಕತ್ತರಿ ಪ್ರಯೋಗ ಮಾಡುವುದು ಸರಿಯಲ್ಲ.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅಭಿಪ್ರಾಯ ವ್ಯಕ್ತಪಡಿಸಲು ಮುಕ್ತ ವಾತಾವರಣ ಸೃಷ್ಟಿಸಿದ್ದೇವೆ. ಎಲ್ಲರಿಗೂ ಅಭಿವ್ಯಕ್ತಿ ಸ್ವಾತಂತ್ರ್ಯ ಇದೆ. ಅದಕ್ಕೆ ಕಡಿವಾಣ ಹಾಕುವುದು ಸರಿಯಲ್ಲ. ಹಾಗೆಂದು ಲೈಂಗಿಕ ಪ್ರಚೋದನೆಯ